ಶ್ರೀ ಪಾಟೀಲ್ ಡಿ.ಆರ್.(ಗದಗ್): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೂರ್ಣ ಪ್ರಮಾಣದಲ್ಲಿ ಬೆಳೆದ ಬೇವು, ಹಲಸು, ಮಾವು, ಹೊನ್ನೆ ಮೊದಲಾದ ದೊಡ್ಡ ಮರಗಳು ಒಂದು ದಿನಕ್ಕೆ ಬಿಡುಗಡೆ ಮಾಡುವ ಪ್ರಾಣ ವಾಯುವಿನ ಪ್ರಮಾಣ ಎಷ್ಟು? ಅದರ ಮೌಲ್ಯ ಎಷ್ಟು? ಪ್ರತ್ಯೇಕ ಮರಗಳ ವಿವರಗಳನ್ನು ನೀಡುವುದು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಈ ವಿವರಗಳನ್ನು ನಿಗಧಿಪಡಿಸುವ ವ್ಯವಸ್ಥೆ ಅರಣ್ಯ ಇಲಾಖೆಯಲ್ಲಿ ಇಲ್ಲದ್ದರಿಂದ ಈ ವಿವರ ಲಭ್ಯವಿಲ್ಲ.

ರಾಜ್ಯದಲ್ಲಿ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವುದು.

2934(3680)

ಶ್ರೀ ಪಾಟೀಲ್ ಡಿ.ಆರ್.(ಗದಗ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸರ್ಕಾರದ ಅಧಿಕಾರಾವಧಿಯಲ್ಲಿ ಬೇರೆ ಬೇರೆ ಶ್ರೇಣಿಯ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಿದ್ದು ಎಷ್ಟು?

ಆ) ಮೇಲ್ದರ್ಜೆಗೇರಿಸಿದ್ದ ಆಸ್ಪತ್ರೆಗಳ ಸಂಖ್ಯೆ ಎಷ್ಟು? ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು.

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಯಾವುದೂ ಇಲ್ಲ.

ಆ) ಯಾವುದೇ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿರುವುದಿಲ್ಲ.

ಮುಂಡರಗಿ ಕಲಾಭವನ ನಿರ್ಮಾಣ ಕಾರ್ಯ.

2935(3329)

ಶ್ರೀ ಪಾಟೀಲ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಜಿಲ್ಲ ಮುಂಡರಗಿಗೆ ಕಲಾಭವನ ಮಂಜೂರು ಮಾಡಿದ್ದು ನಿಜವೇ?

ಆ) ಹಾಗಿದ್ದಲ್ಲಿ ಇನ್ನೂ ಏಕೆ ಕೆಲಸ ಪ್ರಾರಂಭ ಮಾಡಿರುವುದಿಲ್ಲ?

ಇ) ಭವನಕ್ಕೆ ಜಾಗ ಖರೀದಿ ಮಾಡಲು ಸರ್ಕಾರ ಹಣ ಮಂಜೂರು ಮಾಡಿದೆಯೆ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವರು):

ಅ) ಇಲ್ಲ. ಆದರೆ, ಬಯಲುರಂಗಮಂದಿರ ನಿರ್ಮಾಣಕ್ಕಾಗಿ ಅನುದಾನ ಮಂಜೂರು ಮಾಡಲಾಗಿದೆ.

ಆ) ಮುಂಡರಗಿ ಪುರಸಭೆ ಮುಖ್ಯಾಧಿಕಾರಿಗಳಿಗೆ ರೂ.50,000-00ಗಳನ್ನು ಮಂಜೂರು ಮಾಡಿದ್ದು ಬಯಲು ರಂಗಮಂದಿರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿರುವುದಿಲ್ಲ. ಅವಶ್ಯ ನಿವೇಶನವನ್ನು ಒದಗಿಸಿಕೊಂಡು ಬಯಲು ರಂಗಮಂದಿರ ನಿರ್ಮಾಣ ಕಾರ್ಯ ಪ್ರಾರಂಭಿಸಬೇಕೆಂದು ಮುಂಡರಗಿ ಪುರಸಭೆ ಮುಖ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ.

ಇ) ಕಲಾಭವನಕ್ಕಾಗಿ ಜಾಗ ಖರೀದಿಸಲು ಹಣ ಮಂಜೂರು ಮಾಡಿಲ್ಲ. ಆದರೆ ಬಯಲು ರಂಗಮಂದಿರ ನಿರ್ಮಿಸಲು ಪುರಸಭೆಗೆ ಮೇಲ್ಕಂಡಂತೆ ಧನಸಹಾಯ ನೀಡಲಾಗಿದೆ.

ಸಕ್ಕರೆ ನಿರ್ದೇಶನಾಲಯವನ್ನು ಗುಲಬರ್ಗಾಕ್ಕೆ ಸ್ಥಳಾಂತರಿಸುವುದು.

2938(3769)

ಶ್ರೀ ರಾಜೇಂದ್ರ ವರ್ಮ(ಹುಲ್‌ಸೂರ್): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?